**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/34/ಇಸಿಎಸ್(3)/2020

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 13.08.2020.

**ಸುತ್ತೋಲೆ**

ವಿಷಯ : ಸಕಾಲ ಮತ್ತು ಸೇವಾ ಸಿಂಧು ಅಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/34/ಇಸಿಎಸ್(3)/2020, ದಿನಾಂಕ: 04.08.2020.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಜ್ಞಾಪನದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ತಕ್ಷಣವೇ ಸಕಾಲ/ಸೇವಾ ಸಿಂಧು ಅಡಿಯಲ್ಲಿ ಸ್ವೀಕೃತವಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮಕ್ಕಾಗಿ ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ಸೂಚಿಸಲಾಗಿತ್ತು.

ಮುಂದುವರೆದು ಸಕಾಲ ಮತ್ತು ಸೇವಾ ಸಿಂಧು ಅರ್ಜಿಗಳಿಗೆ ಸಂಬಂಧಿಸಿದ ವರದಿಯನ್ನು ಕೇಂದ್ರ ಕಛೇರಿಯಲ್ಲಿ ಪರಿಶೀಲಿಸುವ ಸಮಯದಲ್ಲಿ ಕೆಲವೊಂದು ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಈ ಹಿಂದೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನೀಡಲಾಗಿದ್ದ ಸೇವಾ ಸಿಂಧು Login Password ಅನ್ನು ಬದಲಾಯಿಸಿರುವುದು ಕಂಡು ಬಂದಿರುತ್ತದೆ. Login Password ಅನ್ನು ಸಂಸ್ಥೆಯ ಮಟ್ಟದಲ್ಲಿ ಬದಲಾವಣೆ ಮಾಡಿದ್ದಲ್ಲಿ, ಕೇಂದ್ರ ಕಛೇರಿಯ Co-ordinating ಅಧಿಕಾರಿಯವರಿಗೆ ಸಂಸ್ಥೆಯಲ್ಲಿನ Pending Status ತಿಳಿಯಲು ಸಾಧ್ಯವಾಗುವುದಿಲ್ಲ. ಇದರಿಂದ, ಸರ್ಕಾರಕ್ಕೆ ಸಕಾಲ/ಸೇವಾ ಸಿಂಧು ಅಡಿಯಲ್ಲಿನ ಸೇವೆಗಳ ಪ್ರಗತಿಯನ್ನು ಸಲ್ಲಿಸಲು ಸಾಧ್ಯವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಸೇವಾ ಸಿಂಧು Login Password ಅನ್ನು **Karnataka@123** ಎಂದೇ ಇರಿಸಿಕೊಳ್ಳತಕ್ಕದ್ದು ಹಾಗೂ ಒಂದು ವೇಳೆ Login Password ಅನ್ನು ಬದಲಾಯಿಸಿದ್ದಲ್ಲಿ ಅದನ್ನು **Karnataka@123** ಎಂದೇ ಮಾರ್ಪಡಿಸುವಂತೆ ಹಾಗೂ ಸಂಸ್ಥೆಯ ಮಟ್ಟದಲ್ಲಿನ ಸಕಾಲ/ಸೇವಾ ಸಿಂಧುವಿನ ಅಡಿಯಲ್ಲಿ ಸ್ವೀಕರಿಸಲಾದ ಅರ್ಜಿಗಳನ್ನು ಶೀಘ್ರವಾಗಿ ಮುಂದಿನ ಹಂತಕ್ಕೆ ಮುಂದಿನ ಕ್ರಮಕ್ಕಾಗಿ ಕೇಂದ್ರ ಕಛೇರಿಗೆ ಸಕಾಲ/ಸೇವಾ ಸಿಂಧು Portal ಮುಖಾಂತರ ಕಳುಹಿಸಲು ಸೂಚಿಸಲಾಗಿದೆ.

13/08/2020

**ಕಾರ್ಯದರ್ಶಿ**
**ತಾಂತ್ರಿಕ ಪರೀಕ್ಷಾ ಮಂಡಳಿ**

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ

ಪ್ರತಿ : ಇ-ಆಡಳಿತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.